ರಾಷ್ಟ್ರ ಜಾಗೃತಿಯ ದೈನಿಕ
ಹೊಸ ದಿಗಂತ
HOSADIGANTHAKANNADADAILY

Tuesday, December 13, 2011

## ಸಿಎಂಎಸ್ ಉತ್ಸವ ನಾಟಕ ಸ್ಪರ್ಧೆ

ಬೆಂಗಳೂರು: ಜೈನ್ ವಿಶ್ವವಿದ್ಯಾಲಯದ ಸೆಂಟರ್ ಫಾರ್ ಮ್ಯಾನೇಜ್‌ಮೆಂಟ್ ಸ್ಟಡೀಸ್ ಜನವರಿ 6 ರಿಂದ ಫೆ. 24ರವರೆಗೆ ಆಯೋಜಿಸಿರುವ ಸಿಎಂಎಸ್ ಉತ್ಸವದಲ್ಲಿ ಕನ್ನಡ ಹಾಗೂ ಹಿಂದಿ ಸಣ್ಣ ನಾಟಕಗಳ ಸ್ಪರ್ಧೆ ಏರ್ಪಡಿಸಲಾಗಿದೆ. ಈ ನಾಟಕ ಸ್ಪರ್ಧೆ ಜನವರಿ 6ರಿಂದ 8ರವರೆಗೆ ಬೆಂಗಳೂರಿನಲ್ಲಿ ನಡೆಯಲಿದೆ.

ನಾಟಕ ಸ್ಪರ್ಧೆಯಲ್ಲಿ ಪಾಲ್ಗೊಳ್ಳುವವರಿಗೆ ಉಚಿತ ಪ್ರವೇಶ. ಬೆಂಗಳೂರಿನ ಜಯನಗರ 8ನೇ ಬ್ಲಾಕ್‌ನಲ್ಲಿರುವ ಜೆಎಸ್‌ಎಸ್ ಆಡಿಟೋರಿಯಂನಲ್ಲಿ ಈ ನಾಟಕ ಸ್ಪರ್ಧೆಗಳು ನಡೆಯಲಿವೆ.

ಸ್ಪರ್ಧೆಯಲ್ಲಿ ಮೊದಲ ಸ್ಥಾನ ಗಳಿಸಿದ ತಂಡಕ್ಕೆ ಒಂದು ಲಕ್ಷ ರೂ. ನಗದು ಬಹುಮಾನ ಮತ್ತು ಟ್ರೋಫಿ ನೀಡಲಾಗುವುದು. ನಾಟಕಗಳು 40 ನಿಮಿಷದ ಕಾಲಾವಧಿಯಲ್ಲಿ ಮುಗಿಯುವಂತಿರಬೇಕು.

ವಿವರಗಳಿಗೆ ಸಂಪರ್ಕಿಸಿ: ಕೆ. ಶ್ರೀನಿವಾಸ (9449525457), ಶ್ರೀಮತಿ ಹೇಮಲತಾ (9481607542) ಮತ್ತು ಜ್ಯೋತಿ ಎಸ್. (9880616000). ಇ-ಮೇಲ್: info@cms.ac.in

ರಾಷ್ಟ್ರೀಯ ರಂಗಭೂಮಿ ಉತ್ಸವ ಅಲ್ಲದೆ, ಥ್ರೆಶೋಲ್ಡ್, ಲಾಸ್ಯ (ಸಾಂಸ್ಕೃತಿಕ ಉತ್ಸವ) ಮತ್ತು ಪ್ರೆಸಿಟಿನ್ (ಅಂತಾರಾಷ್ಟ್ರೀಯ ಮ್ಯಾನೇಜ್ಮೆಂಟ್ ಉತ್ಸವ) ಸಿಎಂಎಸ್ ಉತ್ಸವದ ಅಂಗವಾಗಿ ಜರುಗಲಿದೆ ಎಂದು ಪ್ರಕಟಣೆ ತಿಳಿಸಿದೆ.